ಶ್ರೀ ಡಿ. ಮಂಜುನಾಥ್ (ಶಿಕ್ಷಣ ಸಚಿವರು).—

ಅ) ಸರ್ಕಾರವು ಖಾಸಗಿ ಪೂರ್ವ ಪ್ರಾಥಮಿಕ ಶಾಲೆಗಳಿಗೆ ಶೇ. ೨೫ ರಿಂದ ಶೇ. ೭೦ರ ವರೆಗೆ ವಿವಿಧ ಶ್ರೇಣಿಯಲ್ಲಿ ಅನುದಾನವನ್ನು ಬಿಡುಗಡೆ ಮಾಡಲಾಗುತ್ತಿದೆ.

ಆ) ಹೌದು.

ಇ) ಕೆಲವು ಶಾಲೆಗಳಲ್ಲಿ ಸಂಬಳ ಬಿಡುಗಡೆ ಮಾಡಲು ಸ್ವಲ್ಪ ತಡವಾಗಿದೆ.

ಈ) ಸದರಿ ಶಾಲಾ ಶಿಕ್ಷಕರಿಗೆ ಬ್ಯಾಂಕ್ ಮುಖಾಂತರ ಸಂಬಳ ಬಡವಾಡೆ ಮಾಡಲು ಈಗಾಗಲೇ ಕ್ರಮ ಕೈಗೊಳ್ಳಲಾಗಿದೆ.

ಬಿಜಾಪುರ ಮತ್ತು ಕಾರವಾರದಲ್ಲಿ ಸ್ನಾತಕೋತ್ತರ ಕೇಂದ್ರ ತೆರೆಯುವ ಬಗ್ಗೆ ಸರ್ಕಾರದ ವಿವರ

೪೩. (೩೧೦) ಶ್ರೀ ಜಿ.ಎಸ್. ಹೆಗ್ಡೆ ಅಜ್ಜಿಬಾಳ್ (ಅಂಕೋಲ).—ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗೆ ದಯೆಯಿಟ್ಟು ಉತ್ತರಿಸುವರೇ :—

ಬಿಜಾಪುರ ಮತ್ತು ಕಾರವಾರದಲ್ಲಿ ಸ್ನಾತಕೋತ್ತರ ಕೇಂದ್ರ ತೆರೆಯುವ ಬಗ್ಗೆ ಸರ್ಕಾರವು ತೆಗೆದುಕೊಂಡಿರುವ ಕ್ರಮಗಳೇನು ?

ಶ್ರೀ ಡಿ. ಮಂಜುನಾಥ್ (ಶಿಕ್ಷಣ ಸಚಿವರು).—

ಈ ವಿಷಯ ಸರ್ಕಾರದ ಪರಿಶೀಲನೆಯಲ್ಲಿದೆ.

ಸಭೆಯಂ ಮುಂದಿಡಲಾದ ಕಾಗದ ಪತ್ರಗಳು

ಕಾರ್ಯದರ್ಶಿಯವರು.—ಕರ್ನಾಟಕ ವಿಧಾನಸಭೆಯ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮಗಳ ೧೨೫(೧)ನೇ ನಿಯಮದ ಮೇರೆಗೆ.—

ಸಂಸತ್ತಿನಿಂದ ಬಂದ ೧೯೮೬ನೇ ಇಸವಿಯ ಸಂವಿಧಾನದ (೫೪ನೇ ತಿದ್ದುಪಡಿ) ವಿಧೇಯಕದ ಪ್ರತಿಯೊಂದಿಗೆ ಸ್ವೀಕರಿಸಿದ ಸಂದೇಶವನ್ನು ಸಭೆಯ ಮುಂದಿಡುತ್ತೇನೆ.